# ಕೃಷಿ ಸಂಶೋಧನಾ ಕೇಂದ್ರ, ಚಿಂತಾಮಣಿಯ ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳು

4(1)(ಬಿ) :

**(1) ಅದರ ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳ ವಿವರಗಳನ್ನು:**

ಕೃಷಿ ಸಂಶೋಧನಾ ಕೇಂದ್ರ, ಚಿಂತಾಮಣಿಯು 1975ರಲ್ಲಿ ಕೃಷಿ ವಿಶ್ವವಿದ್ಯಾನಿಲಯದಿಂದ ಸ್ಥಾಪಿಸಲ್ಪಟ್ಟು, ಈ ಕೃಷಿ ಸಂಶೋಧನಾ ಕೇಂದ್ರ, ಚಿಂತಾಮಣಿಯಲ್ಲಿ ಕ್ಷೇತ್ರ ಅಧೀಕ್ಷಕರು, ಒಬ್ಬ ಸಹಾಯಕರು, ಒಬ್ಬ ಬೆರಳಚ್ಚುಗಾರರು, ಒಬ್ಬ ಪ್ರಯೋಗಾಲಯ ಸಹಾಯಕರು, ಇಬ್ಬರು ಕ್ಷೇತ್ರ ಸಹಾಯಕರು, ಮೂರುಜನ ಚಾಲಕರು, ಒಬ್ಬರು ಪರಿಚಾರಕರು, ಒಬ್ಬರು ಸಂದೇಶ ವಾಹಕರು, ಒಬ್ಬರು ಮಾಲಿ, ಒಬ್ಬರು ಕಾವಲುಗಾರರು ಮತ್ತು ಮೂವರು ಹಿರಿಯ ಕ್ಷೇತ್ರ ಕಆರ್ಮಿಕರು, ಮೂವರು ಕ್ಷೇತ್ರ ಕಾರ್ಮಿಕರು, ಇಬ್ಬರು ದಿನಗೂಲಿ ಮಸ್ಟರ್ ರೋಲ್ ಕಾರ್ಮಿಕರು, ನೇಮಿಸಲು ಅನುಮೋದನೆಗೊಂಡಿದೆ. ಕ್ಷೇತ್ರ ಅಧೀಕ್ಷಕರು ವಾಹಿನಿಯಾಗಿ ಸಂಶೋಧನೆ ಕಾರ್ಯದಲ್ಲಿ ನಿರತರಾಗಿದ್ದಾರೆ ಇತರೆ ಸಿಬ್ಬಂದಿ ಸಹಾಯ ಮಾಡುತ್ತಾರೆ.

**(2) ಅದರ ಅಧಿಕಾರಿಗಳು ಮತ್ತು ನೌಕರರ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು:**

ಈ ಕೃಷಿ ಸಂಶೋಧನಾ ಕೇಂದ್ರದ ಮುಖ್ಯ ಉದ್ದೇಶ, ರೈತರಿಗೆ ಅನುಕೂಲವಾಗುವ ಧರಗಳಲ್ಲಿ ತೋಟಗಾರಿಕ ಬೆಳೆಗಳಾದ ಮಾವು, ಗೋಡಂಬಿ, ನೇರಳೆ, ಹುಣಸೆ ಗಿಡಗಳ ವಿವಿಧ ತಳಿಗಳನ್ನು ಕಸಿ ಮಾಡಿ ಮಾರಾಟ ಮಾಡುವುದು, ಗೋಡಂಬಿ, ಮಾವು, ನೇರಳೆ ಬೆಳೆಗಳನ್ನು ಬೆಳೆಯುವುದು, ಮಳೆಯಾಶ್ರಿತ ರಾಗಿ, ತೊಗರಿ, ಅಲಸಂದೆ ಬಿತ್ತನೆ ಬೀಜಗಳನ್ನು ಬೆಳೆಯುವುದು ಮತ್ತು ರೈತರಿಗೆ ಕೃಷಿ, ನರ್ಸರಿ, ಹೈನುಗಾರಿಕೆ ಬಗ್ಗೆ ಮಾಹಿತಿ ನೀಡುವುದು.

**(3) ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನವನ್ನು:**

ಕೃಷಿ ಸಂಶೋಧನಾ ಕೇಂದ್ರಕ್ಕೆ ಸಂಬಂಧಪಟ್ಟ ಪ್ರತಿಯೊಂದು ಹಣಕಾಸು ಹಾಗೂ ಆಡಳಿತಕ್ಕೆ ಸಂಬಂಧಿಸಿದ ವಿಷಯಗಳ ಅನುಮೋದನೆಯನ್ನು ಮುಂಚಿತವಾಗಿ ಸಂಶೋಧನಾ ನಿರ್ದೇಶಕರು, ಹಣಕಾಸು ನಿಯಂತ್ರಣಾಧಿಕಾರಿಗಳು, ಮಾನ್ಯ ಕುಲಪತಿಗಳಿಂದ ಪಡೆದು ಕೊಳ್ಳಲಾಗುತ್ತದೆ. ಕೃಷಿ ಸಂಶೋಧನಾ ಕೇಂದ್ರದ ಚಟುವಟಿಕೆಗಳಿಗೆ ಸಂಬಂಧಪಟ್ಟ ಮಾಸಿಕ ಹಾಗೂ ವಾರ್ಷಿಕ ವರದಿಗಳನ್ನು ಸಂಶೋಧನಾ ನಿರ್ದೇಶಕರಿಗೆ ಸಲ್ಲಿಸಲಾಗುತ್ತದೆ.

**(4) ಅದರ ಕಾರ್ಯಗಳ ನಿರ್ವಹಣೆಗೆ ಅದು ರೂಪಿಸಿರುವ ಸೂತ್ರಗಳನ್ನು:**

ಪ್ರತಿ ವರ್ಷವು ಸಂಶೋಧನಾ ನಿರ್ದೇಶನದ ವ್ಯಾಪ್ತಿಯಲ್ಲಿ ಬರುವ ವಿಜ್ಞಾನಿಗಳ ಸಲಹೆಯ ಮೇರೆಗೆ ಹಾಗೂ ವಾರ್ಷಿಕ ಬೆಳೆ ಯೋಜನೆಯ ಉದ್ದೇಶಗಳನ್ನು ರಚನೆ ಮಾಡುತ್ತದೆ.

**(5) ಅದರ ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಅದು ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಅಥವಾ ಅದರ ಉದ್ಯೋಗಿಗಳು ಬಳಸುವ ನಿಯಮಗಳು, ವಿನಿಮಯಗಳು, ಅನಯಸೂಚಿಗಳು ಕೈಪಿಡಿಗಳು ಮತ್ತು ದಾಖಲೆಗಳನ್ನು:**

ಉದ್ದೇಶ, ನಿಯಮಾವಳಿ, ಕೈಪಿಡಿ ಹಾಗೂ ದಾಖಲಾತಿಗಳು ಕೃಷಿ ವಿಶ್ವವಿದ್ಯಾನಿಲಯದ ಅಡಿಯಲ್ಲಿ ನಿಯಂತ್ರಣದಲ್ಲಿದ್ದು, ಪ್ರತಿಯೊಂದನ್ನು ಇದರ ಅಡಿಯಲ್ಲಿ ಬರುವ ನೌಕರರು ಪಾಲನೆ ಮಾಡುತ್ತಾರೆ.

ಕೃಷಿ ಸಂಶೋಧನಾ ಕೇಂದ್ರದ ಕ್ಷೇತ್ರ ಅಧೀಕ್ಷಕರು ತಾಂತ್ರಿಕ ಕಾರ್ಯಕ್ರಮದ ಕುರಿತ ದಾಖಲಾತಿಗಳ ಮತ್ತು ಕೆಲಸದ ಯೋಜನೆಗಳ ಕಾರ್ಯತೆಯನ್ನು ಬಜೆಟ್, ಹಣಕಾಸು, ವಿವರ, ಸ್ಟಾಕ್ ಖರೀದಿ, ಸಂಚಿಕೆ ರಿಜಿಸ್ಟಾರ್ ಅಂದರೆ ನಗದು ಪುಸ್ತಕ, ಡಿ.ಎಂ.ಎಸ್., ಡಿ.ಬಿ.ಆರ್., ಡಿ.ಬಿ.ಐ., ಹಾಗು ಸ್ಟಾಕ್‌ಗಳ ನಿರ್ವಹಣೆ ಮುಖೇನ ಪರಿಶೀಲಿಸುತ್ತಾರೆ.

**(6) ಅದು ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ದಸ್ತಾವೇಜುಗಳ ಪ್ರವರ್ಗಗಳ ವಿವರಪಟ್ಟಿಯನ್ನು:**

ಸಾಮಾನ್ಯ ನಗದು ಪುಸ್ತಕ, ಆವರ್ತಕ ನಿಧಿ ನಗದು ಪುಸ್ತಕ, ಡಿ.ಬಿ.ಆರ್., ಡಿ.ಬಿ.ಐ., ಸ್ಟಾಕ್ ಲೆಡ್ಜರ್, ಸ್ಟಾಕ್ ಇಂಡೆಂಟ್, ಸ್ಟೋರ್ ಡೆಲಿವರಿ, ಡಿ.ಎಂ.ಎಸ್., ವಾಹನ ಲಾಗ್ ಪುಸ್ತಕಗಳು, ಗುತ್ತಿಗೆ ಕೆಲಸಗಳ ಪುಸ್ತಕ, ಹರಾಜು ಪುಸ್ತಕ, ಟ್ರೀ ರಿಜಿಸ್ಟರ್, ಕುರಿಗಳ ದಸ್ತಾನು ಪುಸ್ತಕ, ಹಸುಗಳ ದಾಸ್ತಾನು ಪುಸ್ತಕ, ಮೇಕೆಗಳ ದಾಸ್ತಾನು ಪುಸ್ತಕ, ನಗದು ಬಿಲ್ಲ್ ಪುಸ್ತಕಗಳು, ಮಿಲ್ಕ್ ಹೀಲ್ಡ್ ಪುಸ್ತಕ, ಸೇವಾಪುಸ್ತಕಗಳು.

**(7) ಅದರ ಕಾರ್ಯನೀತಿಯ ರಚನೆ ಅಥವಾ ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂಥ ಯಾವುದೇ ವ್ಯವಸ್ಥೆಯ ವಿವರಗಳನ್ನು:**

---ಅನ್ವಯಿಸುವುದಿಲ್ಲಾ----

(8) ಮಂಡಳಿಗಳು, ಪರಿಷತ್ತುಗಳು, ಸಮಿತಿಗಳು ಅಥವಾ ಇತರೆ ನಿಕಾಯಗಳು ಮತ್ತು ಅದರ ಭಾಗವಾಗಿ ಅಥವಾ ಅದರ ಸಲಹೆಯ ಉದ್ದೇಶಕ್ಕಾಗಿ ರಚಿತವಾದ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನೊಳಗೊಂಡ ಮಂಡಳಿಗಳ, ಪರಿಷತ್ತುಗಳ, ಸಮಿತಿಗಳ ಮತ್ತು ಇತರ ನಿಕಾಯಗಳ ಸಭೆಗಳು ಸಾರ್ವಜನಿಕರಿಗೆ ಮುಕ್ತವಾಗಿರುತ್ತವೆಯೇ ಅಥವಾ ಅಂತಹ ಸಭೆಗಳ ನಡಾವಳಿಗಳು ಸಾರ್ವಜನಿಕರಿಗೆ ದೊರೆಯುತ್ತವೆಯೇ ಎಂಬುದರ ವಿವರಪಟ್ಟಿಯನ್ನು:

---ಅನ್ವಯಿಸುವುದಿಲ್ಲಾ----

(9) ಅದರ ಅಧಿಕಾರಿಗಳ ಮತ್ತು ನೌಕರರ ನಿರ್ದೇಶಿಕೆಯನ್ನು:

---ಅನ್ವಯಿಸುವುದಿಲ್ಲಾ----

(10) ಅದರ ನಿಮಯಗಳಲ್ಲಿ ಉಪಬಂಧಿಸಿರುವಂತೆ ಪರಿಹಾರದ ವ್ಯವಸ್ಥೆಯೂ ಸೇರಿದಂತೆ ಅದರ ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರರು ಪಡೆಯುವ ತಿಂಗಳ ಗೌರವಧನವನ್ನು:

---ಅನ್ವಯಿಸುವುದಿಲ್ಲಾ----

(11) ಎಲ್ಲ ಯೋಜನೆಗಳ ವಿವರಗಳನ್ನು ಸೂಚಿಸುವ, ಪ್ರಾಸ್ತಾವಿತ ವೆಚ್ಚಗಳನ್ನು ಮತ್ತು ಮಾಡಲಾದ ಬಟವಾಡೆಗಳ ವರದಿಯನ್ನು ಸೂಚಿಸಿ; ಅದರ ಪ್ರತಿಯೊಂದು ಏಜೆನ್ಸಿಗೆ ಹಂಚಿಕೆ ಮಾಡಲಾದ ಆಯವ್ಯಯವನ್ನು:

---ಅನ್ವಯಿಸುವುದಿಲ್ಲಾ----

(12) ಹಂಚಿಕೆ ಮಾಡಲಾದ ಮೊಬಲಗನ್ನೊಳಗೊಂಡು, ಸಹಾಯಧನ ಕಾರ್ಯಕ್ರಮಗಳ ಜಾರಿಯ ವಿಧಾನವನ್ನು ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರಗಳನ್ನು:

---ಅನ್ವಯಿಸುವುದಿಲ್ಲಾ----

(13) ಅದು ನೀಡಿರುವ ರಿಯಾಯಿತಿಗಳನ್ನು, ಅನುಮತಿ ಪತ್ರಗಳನ್ನು ಅಥವಾ ಅಧಿಕಾರಪತ್ರಗಳನ್ನು ಪಡೆಯುವವರ ವಿವರಗಳನ್ನು:

---ಅನ್ವಯಿಸುವುದಿಲ್ಲಾ----

(14) ಅದರ ಬಳಿ ಲಭ್ಯವಿರುವ ಅಥವಾ ಅದು ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ, ಮಾಹಿತಿಗೆ ಸಂಬಂಧಿಸಿದ ವಿವರಗಳನ್ನು:

---ಅನ್ವಯಿಸುವುದಿಲ್ಲಾ----

(15) ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕೆಲಸದ ಸಮಯವನ್ನೊಳಗೊಂಡಂತೆ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರಗಳನ್ನು:

---ಅನ್ವಯಿಸುವುದಿಲ್ಲಾ----

(16) ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು, ಪದನಾಮಗಳು ಮತ್ತು ಇತರ ವಿವರಗಳನ್ನು:

---ಅನ್ವಯಿಸುವುದಿಲ್ಲಾ----

(17) ನಿಯಮಿಸಬಹುದಾದಂತಹ ಇತರ ಮಾಹಿತಿಯನ್ನು ಪ್ರಕಟಿಸತಕ್ಕದ್ದು ಮತ್ತು ಆ ತರುವಾಯ ಪ್ರತಿವರ್ಷ ಈ ಪ್ರಕಟಣೆಗಳನ್ನು ಅಂದಿನವರೆಗೆ ಪರಿಷ್ಕರಿಸತಕ್ಕದ್ದು:

---ಅನ್ವಯಿಸುವುದಿಲ್ಲಾ----